# ಏನು ಬರೆದೆಯೊ ಬ್ರಹ್ಮ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi
2. **Ref.:** Purandara Sahitya Darshana, Samputa 1, Jeevana Darshana edited by Prof. S.K. Ramachandra Rao
3. **Ref.:** Shri Purandara Dasara Sahitya Part – 2, Aartha Bhaava, edited by Shri Betageri Krishna Sharma and Shri Bengeri Huchhu Rayaru.
4. **Note:** Lyrics given without highlights are as per Ref. 1. The wordings in Ref. 2 are similar to Ref. 1. The lyrics in Ref. 3 are slightly different and are given in yellow highlights.
5. **Note:** Singer has followed the lyrics as in Ref. 1.
6. **Note:** The Ankita is different in both the books. We have considered book in Ref.1 as standard and taken that Ankita for listing.

| | |
|---|---|
| ರಾಗ: ತೋಡಿ. ತಾಳ: ಆದಿ | ರಾಗ: ಕಾಂಬೋಧಿ ತಾಳ: ಝುಂಪೆ |
| | |
| ಏನು ಬರೆದೆಯೊ ಬ್ರಹ್ಮ ಎಷ್ಟು ನಿರ್ದಯವೊ ॥ ಪ ॥ | ಏನು ಬರೆದೆಯೊ ಬ್ರಹ್ಮ ಎಂತು ನಿರ್ದಯನು ಅಭಿ- |
| ಅಭಿಮಾನವನು ತೊರೆದು ಪರರನ್ನು ಬೇಡುವುದ ॥ ಅಪ ॥ | ಮಾನವನು ತೊರೆದು ಪರರನು ಪೀಡಿಸುವುದ |
| | |
| ಗೇಣೊಡಲು ಪೊರೆವುದಕೆ ಪೋಗಿ ಪರರನು | ಬಲ್ಲಿದರ ಮನೆಯ ಬಾಗಿಲ ಕಾಯ್ದು ಬೇಸತ್ತು |
| ಪಂಚಬಾಣ ಸಮರೂಪ ನೀನೆಂದು ಪೊಗಳೆ | ಸೊಲ್ಲು ಸೊಲ್ಲಿಗೆ ಅವರ ಕೊಂಡಾಡುತಾ |
| ಆಣೆ ನಿನ್ನಾಣಿಲ್ಲ ನಾಳೆ ಬಾರೆಂದೆನಲು | ಇಲ್ಲ ಈ ವೇಳೆಯಲಿ ನಾಳೆ ಬಾ ಎನಲಾಗಿ |
| ಗಾಣ ತಿರುಗುವ ಎತ್ತಿನಂತೆ ಬಳಲುವುದ ॥ 1 ॥ | ಅಲ್ಲವನೆ ತಿಂದ ಇಲಿಯಂತೆ ಬಳಲುವುದ |
| | |
| ಬಲ್ಲಿದರ ಮನೆಯ ಬಾಗಿಲ ಕಾಯ್ದು ಬೇಸತ್ತು | ಗೇಣೊಡಲ ಹೊರೆವುದಕೆ ಹೋಗಿ ನರರೊಳು ಪಂಚ- |
| ಸೊಲ್ಲು ಸೊಲ್ಲಿಗೆ ಅವರ ಕೊಂಡಾಡುತ | ಬಾಣ ಸಮ-ರೂಪ ನೀನೆಂದು ಪೊಗಳೆ |
| ಇಲ್ಲ ಈ ವೇಳೆಯಲಿ ತಿರುಗಿ ಬಾರೆಂದೆನಲು | ಮಾಣು ಎನ್ನಾಣೆ ನೀ ನಾಳೆ ಬಾ ಎಂದೆನಲು |
| ಅಲ್ಲವನು ತಿಂದ ಇಲಿಯಂತೆ ಕೊರಗುವುದ ॥ 2 ॥ | ಗಾಣ ತಿರುಗುವ ಎತ್ತಿನಂತೆ ಬಳಲುವುದ |
| | |
| ಹಿಂದೆ ಬರೆದ ಬರಹ ಹೇಗಾದರಾಗಲಿ | ಹಿಂದೆ ಬರೆದಾ ಬರೆಹ ಏನಾದರಾಗಲಿ |
| ಮುಂದೆನ್ನ ವಂಶದಲಿ ಜನಿಸುವರ ಕಾಯೊ | ಮುಂದೆನ್ನ ವಂಶದಲಿ ಪುಟ್ಟುವರಿಗೆ |
| ಸಂದೇಹಿಸಲು ಬೇಡ ಪುರಂದರ ವಿಠಲ | ಸಂದೇಹ ಬೇಡ ಶ್ರೀ ಪುರಂದರ ವಿಠ್ಠಲನೆ |
| ಕಂದರ್ಪ ಜನಕ ಉಡುಪಿಯ ಕೃಷ್ಣನಾಣೆ ॥ 3 ॥ | ಕಂದರ್ಪನಯ್ಯ ಉಡುಪಿಯ ಕೃಷ್ಣ ರಾಯ |

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಹೊಟ್ಟೆಯ ಪಾಡಿನ ಕ್ರೌರ್ಯದ ಧಗೆಯಲ್ಲಿ ಅಭಿಮಾನ ಆತ್ಮಗೌರವಗಳ ಕುಡಿ ಒಣಗಿ ಹೋಗುವ ಸಂದರ್ಭದ ವಿಶ್ಲೇಷಣೆ ಈ ಪದದಲ್ಲಿದೆ. 'ಬೇಡುವ ಕೈಕೆಳಗೆ' ಎಂಬ ಗಾದೆಯ ಮಾತನ್ನು ಈ ಪದ ನೆನಪಿಗೆ ತರುತ್ತದೆ. ಆತ್ಮಾಭಿಮಾನವನ್ನು ಬಲಿಕೊಟ್ಟು ಪರರ ಎದುರಿಗೆ ಕೈಯೊಡ್ಡಿ ನಿಲ್ಲುವವರ ದೇಹಸ್ಥಿತಿ. ಮನಸ್ಸಿನ ಸ್ಥಿತಿಗಳು ಇಲ್ಲಿ ಚಿತ್ರಣಗೊಂಡಿವೆ. ಹೊಟ್ಟೆಗಿಲ್ಲದ ಸ್ಥಿತಿ ನಮ್ಮನ್ನು, ಇತರರನ್ನು ಆಶ್ರಯಿಸುವ ದೀನ ಸಂದರ್ಭಕ್ಕೆ ಒಳಗು ಮಾಡುತ್ತದೆ. ಸುಳ್ಳೇ ಹೇಳಿ ಅವರನ್ನು ಹೊಗಳಿ ಮನ್ಮಥನಿಗೆ ಸಮಾನ ರೂಪದವರು ಎಂದು ಮೆಚ್ಚಿಸಲು ಹೋಗುವ ಬುದ್ಧಿಯನ್ನು ಪ್ರೇರಿಸುತ್ತದೆ. ಗಾಣ ತಿರುಗುವ ಎತ್ತು, ಅಲ್ಲ (ಶುಂಠಿ) ತಿಂದ ಇಲಿ ಈ ಹೋಲಿಕೆಗಳಂತೂ ತುಂಬ ಸಮಂಜಸವಾಗಿದೆ. ಇಂಥ ಕಂಗಾಲಿನ ಸ್ಥಿತಿ ತನ್ನ ಕಾಲಕ್ಕೇ ಮುಗಿದು ಹೋಗಲಿ, ವಂಶದಲ್ಲಿ ಮುಂದುವರಿಯುವುದು ಬೇಡ ಎಂದು ಆ ನೊಂದ ಜೀವ ಹಾರೈಸುತ್ತದೆ.

**ಏನು ಬರೆದೆಯೋ...** – ಪ್ರತಿಯೊಬ್ಬ ಮನುಷ್ಯನೂ ಭೂಮಿಯ ಮೇಲೆ ಕಾಣಿಸಿಕೊಳ್ಳುವಾಗಲೇ ಅವನ ಹಣೆಯ ಮೇಲೆ ಬ್ರಹ್ಮನ ಬರಹವಿದ್ದು (ಲಲಾಟ ಲಿಖಿತಾ ರೇಖಾ) ಅದರ ಪ್ರಕಾರ ಅವನ ಸುಖದುಃಖಾನುಭವಗಳು ಒದಗುತ್ತವೆ ಎಂದೂ, ಈ ಬರಹವನ್ನು ಯಾರೂ ತಿದ್ದಲಾರರು. ಅಳಿಸಲಾರರು ಎಂದೂ ನಂಬಿಕೆ.

**ಅಭಿಮಾನ** – ಆತ್ಮಾಭಿಮಾನ; ದೈನ್ಯವೃತ್ತಿಯಲ್ಲಿರಬಾರದೆಂಬ ಆತ್ಮವಿಶ್ವಾಸ.

**ಗೇಣೊಡಲು...** – ಗೇಣು ಪ್ರಮಾಣದ ಹೊಟ್ಟೆಯನ್ನು ಹೊರೆಯಲು.

**ಪಂಚಬಾಣಸಮ** – ಪಂಚಬಾಣನೆಂದರೆ ಮನ್ಮಥ; ಅರವಿಂದ (ತಾವರೆ), ಅಶೋಕ, ಚೂತ (ಮಾವಿನ ಚಿಗುರು), ನವಮಲ್ಲಿಕಾ (ಮಲ್ಲಿಗೆ), ನೀಲೋತ್ಪಲ (ಕನ್ನೈದಿಲೆ) ಈ ಐದು ಹೂಗಳನ್ನೇ ಬಾಣಗಳಾಗಿ ಉಪಯೋಗಿಸುವವ. ಅವನಂತೆ ಚೆಲುವನೆಂದು ಕಂಡಕಂಡವರನ್ನು ಹೊಗಳಬೇಕಾದ ಪರಿಸ್ಥಿತಿ.

**ಬಲ್ಲಿದರ** – ಹಣವಂತರ.

**ಸೊಲ್ಲುಸೊಲ್ಲಿಗೆ** – ಮಾತುಮಾತಿಗೆ; ಅಡಿಗಡಿಗೆ.

**ಅಲ್ಲ** – ಶುಂಠಿ.

**ಕಂದರ್ಪಜನಕ** – ಮನ್ಮಥನ ತಂದೆಯಾದ ಕೃಷ್ಣ.

**ಮಾಣು** = ಬಿಡು, ತಡೆ, ಹೋಗು

**Classification:** Keerthane

**Ankita:** purandara vittala

**Location:** NA

**Category:** Artha Bhava, Samsara Jigupse

**Sub-Category:** brahma, nara, srimanta, bagilu, ili, ANe, huttu, anumana, manmatha, Udupi, Krishna,

**Pravachana:** NA

**Explanation:** NA